ಶ್ರೀ ಯು. ಎಂ. ಮಾದಪ್ಪ.—ಇನ್ನು ಮುಂದೆಯಾದರೂ ತಿಂಗಳಿಗೊಂದು ಸಾರಿಯಾದರೂ ಕಮಿಟಿಯನ್ನು ಕರೆಯುವುದು ಅವಶ್ಯಕವೆಂದು ತಿಳಿವಳಿಕೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತಿಳಿವಳಿಕೆ ಕೊಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸದಸ್ಯರನ್ನು ಕೇಳಿ ಅದರಂತೆ ಮಾಡಬೇಕೆಂದು ಸಲಹೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕಮಿಟಿ ಸದಸ್ಯರ ಸಲಹೆಯನ್ನು ಪಡೆದೇ ಕಾರ್ಯಕ್ರಮ ಕೈಕೊಳ್ಳಬೇಕೆಂಬುದು ಕಮಿಟಿಯನ್ನು ರಚಿಸಿರುವುದರ ಉದ್ದೇಶ.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರಿ ಅಧಿಕಾರಿಗಳು ಸಮಿತಿಯ ಮೆಂಬರುಗಳ ಇಷ್ಟಾನುಸಾರವೇ ಮಾಡಬೇಕಾದ ಅವಶ್ಯಕತೆಯಿಲ್ಲವೆಂದು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

Mr. SPEAKER.—All these questions are absolutely unnecessary. Rs. 59,000 are allotted, Rs. 17,000 have been spent, the remaining is to be spent. It is your function to see to it, being a member of the District Board.

Thotis and Talwars.

Q.—563. **Sri J. NARAYANAPPA** (Chintamani—Scheduled Castes).—Will the Government be pleased to State.—

(*a*) the duties of Thotis and Talwars in our State;

(*b*) whether they are given any privilege leave or sick leave;

(*c*) whether Miras is being paid to them in full as per rules;

(*d*) if it is not paid, whether it will be possible to fix salaries to them?

A.—(*a*) **Sri Kadidal MANJAPPA** (Minister for Revenue and Public Works).—The duties of the Thotis and Talwars are laid down in Rules 84 and 85 respectively, of the Rules under the Village Officers, Act.

Rule 84.—The Thotis are the responsible Watchmen of the village and its crops. They are required to assist the Patels and Shanbhogs in the collection of revenue; to act as guides to the Government Officers and travellers of importance and, in the absence of the Talari, have to perform the duties of that Official in addition to their own.

Rule 85.—The Talari is the Scout of the village. He traces robbers and thieves, watches the movement of suspicious characters in villages and is in fact the police peon to the Patel.

(*b*) They are given leave up to a maximum of three months. There is no classification of leave into privilege leave and sick leave in the case of these village servants.

(*c*) Yes. Complaints of non-payment or part-payment of Miras will be duly attended to by the local officers.

(*d*) It is not possible to fix salaries.

ಶ್ರೀ ಜೆ. ನಾರಾಯಣಪ್ಪ.—ತೋಟಿ ತಳವಾರರುಗಳು ಇಷ್ಟೇ ಕೆಲಸ, ಇಂಥದೇ ಕೆಲಸ ಮಾಡಬೇಕೆಂದೇನಾದರೂ ಇದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟೇ ಕೆಲಸ ಮಾಡಬೇಕೆಂದೇನೂ ವಿಧಾಯಕವಾಗಿಲ್ಲ. ಅವರ ಜವಾಬ್ದಾರಿಯನ್ನು ಅವರು ನಿರ್ವಹಿಸಬೇಕೆಂದು ಕಾನೂನಿದೆ.

ಶ್ರಿ ಜೆ. ನಾರಾಯಣಪ್ಪ.—ರಾತ್ರಿ ಕಾವಲು ಮತ್ತು ಹಗಲು ಕೆಲಸ ಎರಡನ್ನೂ ತಪ್ಪದೆ ಅವರು ಮಾಡಬೇಕೇ?

ಶ್ರಿ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ. ಅವರ ಕರ್ತವ್ಯ ಅವರು ಮಾಡಬೇಕು.

ಶ್ರೀ ಜೆ. ನಾರಾಯಣಪ್ಪ.—ಅವರಿಗೆ ಮಿರಾಸೆ ಸರಿಯಾಗಿ ಸಲ್ಲುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮಿರಾಸೆ ಸಲ್ಲುತ್ತಿಲ್ಲವೆಂದು ಅಮಲ್ದಾರರಿಗೆ ದೂರುಕೊಟ್ಟರೆ ಸರಿಪಡಿಸುತ್ತಾರೆ.

ಶ್ರೀ ಜೆ. ನಾರಾಯಣಪ್ಪ.—ಈ ಆಹಾರಾಭಾವದ ಕಾಲದಲ್ಲಿ ಮಿರಾಸೆಯನ್ನೂ ಹೀಗೆ ಸಲೀ

ಸಾಗಿ ಕೊಡದೆ ಇದ್ದಪಕ್ಷಕ್ಕೆ ಅವರ ಜೀವನಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ದೂರುಬಂದರೆ ಮಿರಾಸೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ರೀತಿ ಮಿರಾಸೆ ಕೊಟ್ಟಿಲ್ಲವೆಂದು ಹೇಳಿ ಇದುವರೆಗೆ ಎಷ್ಟು ದೂರುಗಳು ಬಂದಿವೆಯೆಂದು ತಮ್ಮ ಗಮನಕ್ಕೆ ಬಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಚಕ್ರ, ತೋಟತಳವಾರರುಗಳಿಗೆ ಅವರು ಮಾಡುವ ಕೆಲಸಕ್ಕಾಗಿ ಎಂದು ಕೆಲವು ಸರ್ವಿಸ್ ಇನಾಂತಿಗಳನ್ನು ಕೊಟ್ಟಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟರ ಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗೆ ಚಕ್ರ ಇನಾಂತಿಗಳನ್ನು ವಜಾಮಾಡಿಬಿಟ್ಟು ಬೇರೆ ಬೇರೆಯವರಿಗೆ ವಿಲೇವಾರಿಮಾಡಿ ವ್ಯವಸಾಯಮಾಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದನ್ನು ನಮ್ಮ ಗಮನಕ್ಕೆ ತಂದರೆ ಪರಿಹಾರದ ಅವಶ್ಯಕತೆಯಿದ್ದರೆ ಕೊಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆಹಾರದ ವಸೂಲಿ ಸಂಬಂಧದಲ್ಲಿ ಚಕ್ರತಳವಾರರು ಸಹಕರಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸಹಕರಿಸಿರ ಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪಟೇಲ್ ಶಾನುಭೋಗರುಗಳಿಗೆ ಈ ವಸೂಲಿ ಬಗ್ಗೆ ಬೋನಸ್ ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಕೆಲಸದ ವಿಷಯದಲ್ಲಿ ಹೆಚ್ಚಾಗಿ ಚಕ್ರತಳವಾರರುಗಳು ಕೆಲಸ ಮಾಡುವವರಾಗಿರುವುದರಿಂದ ಅವರಿಗೂ ಏನಾದರೂ ಸಂಭಾವನೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಹೆಚ್ಚಿಗೆ ಕೆಲಸ ಮಾಡಿರುವುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪಟೇಲ್ ಶ್ಯಾನುಭೋಗರು ಮಾಡಿದ್ದಕ್ಕೆ ಮಾತ್ರ ಕೊಡುವುದು, ಇವರು ಮಾಡುವ ಕೆಲಸಕ್ಕೆ ಏನೂ ಕೊಡದಿರುವುದು ಸರಿಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಮಿರಾಸೆ ಕೊಡುತ್ತಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಿರಾಸೆಯನ್ನು ಕೊಡುತ್ತಿಲ್ಲವಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ವಸೂಲುಮಾಡುವುದಕ್ಕೆ ಅವಕಾಶ ವಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಿರಾಸೆಗೆ ಬದಲು ಸಂಬಳ ಕೊಡುತ್ತೀರಾ, ಎಂದು ಕೇಳಿದ್ದಕ್ಕೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಇನ್ನೊಂದು ಕಡೆ ಅವರ ಹಕ್ಕು ಬಾಧ್ಯತೆಗಳನ್ನು ಪರೀಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ಇದರಲ್ಲಿ ನಿಮ್ಮ ನಿರ್ದಿಷ್ಟವಾದ ನೀತಿಯಾವುದು?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ. ಈಗಿರತಕ್ಕ ಕಾನೂನಿನ ಪ್ರಕಾರ ಒಂದೇ ನೀತಿಯನ್ನು ನಾವು ಪಾಲಿಸುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.—ರೆವೆನ್ಯೂ ಇಲಾಖೆಯಲ್ಲಿ ಪಟೇಲ್ ಶ್ಯಾನುಭೋಗರುಗಳಿಗೆ ಹೇಗೆ D.C.B. ಮೇಲೆ ಫೋಟೆಗೆಯನ್ನು ವಜಾಮಾಡಿ ಕೊಡುತ್ತೀರೋ ಅದೇ ರೀತಿ ಚಕ್ರತಳವಾರರಿಗೂ ಡಿಮ್ಯಾಂಡ್-ಕಲೆಕ್ಷ್ಷನ್ ಮೇಲೆ ವಸೂಲುಮಾಡಿ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಬಿ. ರಾಚಯ್ಯ.—ರೆವೆನ್ಯೂ ಕಂದಾಯದ ವಸೂಲಿಯಲ್ಲಿ ಹೇಗೆ ಪಟೇಲ್ ಶ್ಯಾನುಭೋಗರುಗಳಿಗೆ ಒಂದು ಭಾಗವನ್ನು ಪೋಟೆಗೆಯೆಂದು ತೆಗೆದುಕೊಡುತ್ತೀರೊ ಹಾಗೆಯೇ ಚಕ್ರತಳವಾರರುಗಳಿಗೂ ಕೊಡುವ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಯನ್ನು ಯೋಚಿಸಬಹುದು.

ಶ್ರೀ ಎಸ್. ಗೋಪಾಲಗೌಡ.—ಸಂಸ್ಥಾನದ ಎಲ್ಲಾ ಕಡೆಯಲ್ಲೂ ತೋಟಿತಳವಾರರುಗಳಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡಿನಲ್ಲಿ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ತೋಟಿತಳವಾರರುಗಳಿಗಿರುವ ಸ್ಥಾನಮಾನಗಳೇನು ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲೇ ಹೇಳಿದೆಯಲ್ಲ.

ಶ್ರೀ ಎಸ್. ಎಂ. ಮರಿಯಪ್ಪ.—ತೋಟಿತಳವಾರರುಗಳಿಗೆ ಇನಾಂತಿ ಜಮೀನುಗಳನ್ನು ಕೊಟ್ಟಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಕೊಟ್ಟಿದೆ.

ಶ್ರೀ ಎಸ್. ಎಂ. ಮರಿಯಪ್ಪ.--ಕೊಡದಿರುವ ಸಂದರ್ಭಗಳನ್ನು ತಮ್ಮಗಮನಕ್ಕೆ ತಂದರೆ ಇನಾಂತಿಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇರುವ ಇನಾಂತಿಗಳನ್ನೇ ರದ್ದುಮಾಡಬೇಕೆಂದು ಯೋಚನೆ ಮಾಡುತ್ತಿರುವಾಗ ಈಗ ಹೊಸದಾಗಿ ಇನಾಂತಿಗಳನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಕಾನೂನಿನಲ್ಲಿ ತಳವಾರರುಗಳು ಊರಿನ ಸ್ಕೌಟನಂತಿದ್ದಾರೆಂದು ಹೇಳಿರುವುದರಿಂದ ಅವರು ಭಿಟ್ಟಿ ಕೆಲಸ ಮಾಡುತ್ತಿದ್ದಾರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಿಟ್ಟಿ ಕೆಲಸ ಮಾಡಬೇಕೆಂದು ಹೇಳಿಲ್ಲ. ಅವರ ಕರ್ತವ್ಯ ಮಾಡುತ್ತಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಅವರ ಕರ್ತವ್ಯಗಳನ್ನೇ ಮಾಡುತ್ತಿದ್ದರೂ, ಕಾನೂನಿನಲ್ಲಿ ಸ್ಕೌಟು ಎಂದು ಹೇಳಿರುವುದರಿಂದ ಅವರಿಂದ ಬಿಟ್ಟಿಕೆಲಸಗಳನ್ನು ಅಪೇಕ್ಷಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸ್ಕೌಟ್ ಎಂಬ ಪದವನ್ನು ತೆಗೆದು ಅವರನ್ನು Servants of Government ಎಂದು ಕರೆಯುವಂತೆ ಸಂಬಂಧಪಟ್ಟ ಕಾನೂನಿನಲ್ಲಿ ಮಾರ್ಪಾಡುಮಾಡುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವಶ್ಯಕತೆಯಿದ್ದರೆ ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ತೋಟಿತಳವಾರರುಗಳಿಗೆ ಮಿರಾಸೆಯ ಬದಲು ಮಾಹೆಯಾನ ವೇತನವನ್ನು ಕೊಡುವುದಕ್ಕೆ ಅವಕಾಶಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಷಯ ಬಹಳ ದಿವಸಗಳ ಹಿಂದೆಯೇ ಚರ್ಚೆಯಾಗಿ ಅರಿಕೆಗಳು ಬಂದು, ಅಸೆಂಬ್ಲಿಯಲ್ಲೂ ಚರ್ಚೆಯಾಗಿ, ಸರ್ಕಾರದವರು ವಿಮರ್ಶೆಮಾಡಿ ಸಾಧ್ಯವಿಲ್ಲವೆಂದು ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಈ ಬಗ್ಗೆ ಗುಂಡಪ್ಪ ಗೌಡರ ಕಮಿಟಿಯಿಂದ ಸರ್ಕಾರಕ್ಕೇನೂ ಶಿಫಾರಸ್ಸು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಚ್. ಕೆ. ಸಿದ್ದಯ್ಯ.—ಸಂಸ್ಥಾನಾಮಳೆ ತೋಟಿತಳವಾರರುಗಳಿಗೆ ಕೊಟ್ಟಿರುವ ಜಮೀನುಗಳನ್ನು ಅವರಿಗೆ ಖಾಯಂಮಾಡಿ ಸಂಬಳ ಕೊಡಬೇಕೆಂಬ ಯೋಚನೆ ಆಗಾಗ್ಗೆ ನಮ್ಮ ಈ ಸಭೆಯಲ್ಲಿ ಚರ್ಚೆಗೆ ಬಂದು ತಮ್ಮ ತೀರ್ಮಾನ ಹೇಳುತ್ತೇವೆಂದು ಹೇಳಿದ್ದಿರಿ. ಆ ವಿಷಯವೇನಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಯೋಚನೆ ಮಾಡುತ್ತಲೇ ಇದ್ದೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಅದನ್ನೇನಾದರೂ ಸದ್ಯದಲ್ಲೇ ತೀರ್ಮಾನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಅದಕ್ಕಾಗಿ ಒಂದು ಬಿಲ್ಲನ್ನು ತಯಾರುಮಾಡಿ ಮುಂದಿನ ಅಧಿವೇಶನದಲ್ಲಿ ಸಭೆಯಮುಂದೆ ತರುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಎಂ. ಮಾದಯ್ಯ.—ಮಿರಾಸೆ ಕೊಡುವ ವಿಷಯವನ್ನು ಪರಿಶೀಲನೆ ಮಾಡುವುದು 1948 ನೆಯ ಇಸವಿಯಲ್ಲಿ ಒಂದು ಸ್ಪೆಷಲ್

ಕಮಿಟಿಗೆ refer ಆಗಿ ಆ ಕಮಿಟಿಯವರು ಸರ್ಕಾರಕ್ಕೆ ಏನು advise ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಎಂ. ಮಾದಯ್ಯ.—ಅವರು ಮಾಡಿರುವ ಶಿಫಾರಸುಗಳೇನು?

ಶ್ರೀ ಕಡಿದಾಳ್ ಮಂಜಪ್ಪ.—ದೂರುಗಳು ಬಂದಲ್ಲಿ ಮಿರಾಸೆಯನ್ನು ಜಾಗ್ರತೆ ವಸೂಲು ಮಾಡಿಕೊಡುವ ಏರ್ಪಾಡು ಮಾಡಬೇಕೆಂದು ತೀರ್ಮಾನಮಾಡಿದ್ದಾರೆ.

9-30. A.M.

ಶ್ರೀ ಎಂ. ಮಾದಯ್ಯ.—ಮಿರಾಸೆ ಕೊಡುವ ವಿಚಾರವನ್ನು ಪರಿಶೀಲನೆ ಮಾಡುವುದಕ್ಕೆ 1945 ನೆಯ ಇಸವಿಯಲ್ಲಿ ಒಂದು ಸ್ಪೆಷಲ್ ಕಮಿಟಿಯನ್ನು ನೇಮಕಮಾಡಿದ್ದುದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಎಂ. ಮಾದಯ್ಯ.—ಆದರ ವರದಿಯ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿರಿ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಮಿರಾಸೆ ಕೊಡುವುದಕ್ಕೆ ಪ್ರಯತ್ನಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಎಂ. ಮಾದಯ್ಯ.—ಐದು ವರ್ಷಗಳ ಕಾಲ ಪ್ರಯತ್ನಪಟ್ಟು ನೋಡಿ ಸಮರ್ಪಕವಾದ ರೀತಿಯಲ್ಲಿ ಮಿರಾಸೆ ಕೊಡದಿದ್ದರೆ, ಅನಂತರ ಅವರಿಗೆ ಸಂಬಳ ಕೊಡಬೇಕೆಂದು ಸಮಿತಿಯವರು ಸಲಹೆಮಾಡಿದ್ದುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಮಾದಯ್ಯ.—ಈ ಪ್ರಶ್ನೆಗೆ ಉತ್ತರ ಕೊಡುವಾಗ ಆ ಫೈಲನ್ನು ತಮ್ಮಲ್ಲಿಟ್ಟುಕೊಂಡು ಉತ್ತರ ಕೊಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲವನ್ನೂ ಇಟ್ಟು ಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಾದಯ್ಯ.—ಆ ಆರ್ಡರ್ ಏನಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಆಮೇಲೆ ನೋಡಿ ತಿಳಿಸುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಗ್ರಾಮ ನೌಕರರಿಗೆ ಇನಾಮ್ ಜಮೀನು ಕೊಟ್ಟಿರುವುದನ್ನು ಯಾವ ಕಾರಣದಿಂದಾದರೂ ಬದಲಾಯಿಸುತ್ತೀರಾ?

Sri Kadidal MANJAPPA.—The matter is under consideration, Sir.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ ಕ್ಷಾಮಪ್ರದೇಶಗಳಲ್ಲಿ ಹರಿಜನರು ಆ ಜಮೀನುಗಳಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ, ವ್ಯವಸಾಯಮಾಡುವುದಕ್ಕೆ ತಕಾವಿ ಮುಂತಾದ ಸಾಲಗಳನ್ನು ಕೊಡುತ್ತಿಲ್ಲ, ಇನಾಂ ಜಮೀನುಗಳೆಂದು ಇವುಗಳ ಮೇಲೂ ಕೊಡಲು ಅವಕಾಶ ಮಾಡುತ್ತೀರಾ?

Sri Kadidal MANJAPPA.—Notice please.

ಶ್ರೀ ಆರ್. ಮುನಿಸ್ವಾಮಯ್ಯ.—ಗ್ರಾಮ ಪಂಚಾಯಿತಿ ಕೆಲಸಗಳನ್ನು ತೋಟಿ ತಳವಾರರಿಂದ ಏಕೆ ಮಾಡಿಸುತ್ತಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಯಾವ ಯಾವ ಕೆಲಸಗಳನ್ನು ಮಾಡಬೇಕೆಂದು ವಿಧಿ ಇದೆಯೊ ಆ ಕೆಲಸಗಳನ್ನು ಮಾಡುತ್ತಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅವರಿಗೆ ವೇತನಗಳನ್ನೇರ್ಪಡಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವರ ಪಾಲಿಗೆ ಬಂದ ಕರ್ತವ್ಯಗಳನ್ನು ಅವರು ಮಾಡಬೇಕಾದದ್ದು; ಅದಕ್ಕೆ ವೇತನ ಕೊಡಬೇಕಾಗಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಅವರೇ ಗ್ರಾಮಪಂಚಾಯಿತಿ ಕೆಲಸವನ್ನೂ ಮಾಡಬೇಕೆಂದು ನಿಗದಿ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಪ್ರಕಾರ ಅವರ ಕೆಲಸಗಳನ್ನು ಗೊತ್ತುಮಾಡಿದ್ದಾರೆ, ಅದನ್ನು ಅವರು ಮಾಡುತ್ತಾರೆ.

ಶ್ರೀ ಸಿ. ಟಿ. ಹನುಮಂತಯ್ಯ.—ಭೂಸುಧಾರಣೆ ಸಮಿತಿಯವರು ತೋಟತಳಾರಿಗಳಿಗೆ ಮಿರಾಸೆ ಸರಿಯಾಗಿ ದೊರಕುತ್ತಿಲ್ಲ, ವೇತನ ಕೊಡಬೇಕು ಎಂದು ಶಿಫಾರಸು ಮಾಡಿಲ್ಲವೆ?

ಅಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಟಿ. ಹನುಮಯ್ಯ.—ಗ್ರಾಮ ನೌಕರರಿಗೆ ಸಂಬಂಧಪಟ್ಟ ಕಾನೂನು ಎಷ್ಟನೆಯ ಇಸವಿಯಲ್ಲಿ ಆಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಆ ಆಕ್ಟಿನಲ್ಲೇ ಇದೆ.

ಶ್ರೀ ಟಿ. ಹನುಮಯ್ಯ.—ಎಷ್ಟನೆಯ ಇಸವಿಯಲ್ಲಿ ಅದು ಕಾನೂನಾಗಿ ಜಾರಿಗೆ ಬಂದದ್ದು ಎಂಬುದು ನನ್ನ ಪ್ರಶ್ನೆ.

ಶ್ರೀ ಕಡಿದಾಳ್ ಮಂಜಪ್ಪ.—1908 ರಲ್ಲಿ ಎಂದು ನನ್ನ ನೆನಪು.

ಶ್ರೀ ಟಿ. ಹನುಮಯ್ಯ.—ಈಗ ಪ್ರಜಾ ಪ್ರಭುತ್ವ ಬಂದಿರುವಾಗ ಆ ಕಾನೂನು ಜಾರಿಯಲ್ಲಿರುವುದು ಸಮಂಜಸವಲ್ಲವೆಂಬುದನ್ನು ಮನಗಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯ.

ಶ್ರೀ ಟಿ. ಹನುಮಯ್ಯ.—ತೋಟತಳವಾರರು ಸರ್ಕಾರಿ ನೌಕರರೆ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ದೃಷ್ಟಿಯಿಂದ ಹೌದು.

ಶ್ರೀ ಟಿ. ಹನುಮಯ್ಯ.—ಆ ಒಂದು ದೃಷ್ಟಿ ಯಾವುದು?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಕೆಲಸವನ್ನು ಮಾಡುವ ದೃಷ್ಟಿಯಿಂದ ಸರ್ಕಾರಿ ನೌಕರರು.

ಟಿ. ಹನುಮಯ್ಯ.—ಅವರಿಗೆ ಸಂಬಳ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ರೆಮ್ಯೂನರೇಷ್ಟ ಇದೆ.

ಶ್ರೀ ಟಿ. ಹನುಮಯ್ಯ.—ಬಲಾತ್ಕಾರದಿಂದ ಕೆಲಸಮಾಡಿಸುವುದು ಭಾರತ ರಾಜ್ಯಾಂಗಕ್ಕೆ ವಿರುದ್ಧವೆಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಲಾತ್ಕಾರದ ಕೆಲಸ ಎಂದರೆ ಅರ್ಥವಾಗಲಿಲ್ಲ; ಅವರ ಕೆಲಸವನ್ನು ಅವರು ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಬಿಟ್ಟ ಕೆಲಸ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಿಟ್ಟ ಕೆಲಸ ಮಾಡುತ್ತಿರುವುದು ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅವರಿಗೆ ಏನು ರೆಮ್ಯೂನರೇಷ್ಟ ಕೊಡುತ್ತಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಮಿರಾಸಿ, ಕೆಲವು ಕಡೆ ಜಮೀನು ಇದೆಲ್ಲ ಇದೆ.

ಶ್ರೀ ಟಿ. ಹನುಮಯ್ಯ.—ಮಿರಾಸಿ ವಿಷಯದಲ್ಲಿ ಡಿ. ಸಿ. ಬಿ. ಪಟ್ಟಿಯನ್ನು ತಯಾರು ಮಾಡಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಹನುಮಯ್ಯ.—ಅವರಿಗೆ ವರ್ಷಕ್ಕೆ ಮೂರು ತಿಂಗಳು ರಜ ಕೊಡುತ್ತಾರೆಂದು ಹೇಳಿದೆ. ಸರ್ಕಾರಿ ನೌಕರರೆಂದು ತಿಳಿದು ಕೊಂಡು ಅವರಿಗೆ ರಜಾ ಕೊಡುತ್ತಾರೋ ಅಥವಾ ಬೇರೆ ಕಾನೂನಿನ ಪ್ರಕಾರ ಕೊಡುತ್ತಾರೊ?

ಶ್ರೀ ಕಡಿದಾಳ್ ಮಂಜಪ್ಪ.—ವಿಲೇಜ್ ಆಫೀಸರ್ಸ್ ಕಾನೂನು ಮತ್ತು ರೂಲ್ಸ್ ಪ್ರಕಾರ.

ಶ್ರೀ ಟಿ. ಹನುಮಯ್ಯ.—ವಿಲೇಜ್ ಆಫೀಸರ್ಸ್ ಕಾನೂನನ್ನು ಆದಷ್ಟು ಬೇಗ ರದು ಮಾಡಲು ಯೋಚನೆಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥ ಪ್ರಮೇಯ ಬಂದಿಲ್ಲವೆಂದು ಸರ್ಕಾರದ ಅಭಿಪ್ರಾಯ.

———

QUESTIONS FOR ANSWERS ON THE DAY.

But not taken up.

Acquisition of Lands in Doddasiddavanahalli for Village Extension.

Q.–354. Sri Mulka GOVINDA REDDY (Chitaldurg).—

Will the Government be pleased to state.—

(*a*) when the application from villagers was made for acquring S. No. 408 in Doddasiddavanahalli village in Chitaldrug Taluk for village extension improvement;

(*b*) when the Government first ordered for its acquisition;